**ದಿನಾಂಕಃ 19/09/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಹೆಚ್.ಕೆ.ಎಸ್ ವಕೀಲರಿಂದಃ**

1. ನಾನು ಮೈಸೂರಿನ ಕಾಮನಕೆರೆಹುಂಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ದಾವಾಸ್ವತ್ತಿಗೂ ನಾನು ಕೆಲಸ ನಿರ್ವಹಿಸುತ್ತಿರುವ ಸ್ಥಳಕ್ಕೂ 80 ಕಿ.ಮೀ ಅಂತರ ಇದೆ. ನಾನು ಮೈಸೂರಿನಲ್ಲಿ ಮನೆ ಮಾಡಿಕೊಂಡಿದ್ದೇನೆ. ಸಾಕ್ಷಿ ಮುಂದುವರೆದು ಊರಿನಲ್ಲೂ ಮನೆ ಇದೆ ಎಂದು ನುಡಿಯುುತ್ತಾರೆ. ಮೈಸೂರಿನಿಂದ ಕೆಲಸ ಮಾಡುವ ಸ್ಥಳಕ್ಕೂ 2 ಕಿ.ಮೀ ಅಂತರ ಇದೆ. ನಾನು ವಾರದಲ್ಲಿ 2-3 ದಿನ ಊರಿಗೆ ಬಂದುಹೋಗುತ್ತೇನೆ. ನನ್ನ ಮನೆಯವರು ಮೈಸೂರಿನಲ್ಲೂ ಹಾಗೂ ನಮ್ಮ ಊರಿನಲ್ಲೂ ಇರುತ್ತಾರೆ. ನನ್ನ ಮನೆಯವರು ಮೈಸೂರಿನಲ್ಲಿ ವಾರಕ್ಕೆ 3-4 ದಿನ ಇರುತ್ತಾರೆ.

2. ಮಧುಕರ್ ಎಂಬ ವಕೀಲರನ್ನು ಮೊದಲು ನೇಮಿಸಿಕೊಂಡಿದ್ದೆವು. ಈ ದಾವೆಯನ್ನು ನಯಾಜ್ ಪಾಷ ರವರು ಹೂಡಿದ್ದರು. ಆದರೆ ಮಾಹಿತಿಯನ್ನು ಮಧುಕರ್ ರವರಿಗೆ ನೀಡಿದ್ದೆ. ಮಧುಕರ್ ರವರು ವಕಾಲತ್ತಿಗೆ ಸಹಿ ಮತ್ತು ಸೀಲನ್ನು ಹಾಕಿದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಮತ್ತು ನನ್ನ ಮನೆಯವರು ಮಧುಕರ್ ವಕೀಲರಿಗೆ ಮಾಹಿತಿ ನೀಡಿ, ನಯಾಜ್ ಪಾಷ ವಕೀಲರ ಮುಖಾಂತರ ದಾವೆ ಹೂಡಿದ್ದೆವು. ನಾನು ವಕಾಲತ್ತಿಗೆ ನಯಾಜ್ ಪಾಷ ರವರ ಕಚೇರಿಯಲ್ಲಿ ಸಹಿ ಮಾಡಿದ್ದೆ. ವಕಾಲತ್ತಿನಲ್ಲಿ ಮಧುಕರ್.ಕೆ ಎಂಬುವವರ ಸೀಲು ಮತ್ತು ಸಹಿ ಇದೆ. ಅದರಲ್ಲಿ ನನ್ನ ಹೆಂಡತಿಯ ಸಹಿ ಇದೆ. ನನ್ನ ಹೆಂಡತಿ ವಕಾಲತ್ತಿಗೆ ಸಹಿ ಮಾಡುವಾಗ ನಾನು ಜೊತೆಯಲ್ಲಿ ಇದ್ದೆ. ದಿಃ 08/01/2012 ರಂದು ನನ್ನ ಹೆಂಡತಿ ಮಧುಕರ್ ರವರ ವಕಾಲತ್ತಿಗೆ ಸಹಿ ಮಾಡಿಲ್ಲ. ಬರೆಯುವಾಗ ಇಸವಿ ತಪ್ಪಾಗಿರಬಹುದು.

3. ನಿಪಿ.1 ನ್ನು ಸಂದೀಪ್ ವಕೀಲರ ಕಚೇರಿ, ಪಿರಿಯಾಪಟ್ಟಣದಲ್ಲಿ ಮಾಹಿತಿ ಕೊಟ್ಟು ಬರೆಸಿದ್ದೆ. ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿವೆ. ಅದರಲ್ಲಿ ಯಾವುದೇ ತಿದ್ದುಪಡಿಯಾಗಿಲ್ಲ. ನಿಪಿ.1 ರಲ್ಲಿ ನಾನು ಸಹಿ ಮಾಡುವಾಗ ದೊಡ್ಡಲಿಂಗಮ್ಮ ಎಂಬ

ಹೆಸರನ್ನು ತಿದ್ದಿರಲಿಲ್ಲ. ತಿದ್ದುಪಡಿ ಮಾಡಿದ ಬಗ್ಗೆ ನಾನಾಗಲೀ, ನನ್ನ ವಕೀಲರಾಗಲೀ ಸಹಿ ಮಾಡಿಲ್ಲ. ನನ್ನ ಹೆಂಡತಿಗೆ ಕನ್ನಡದಲ್ಲಿ ಮಾತನಾಡಲು ಬರುವುದಿಲ್ಲ ಹಾಗೂ ಆಕೆಗೆ 4 ವರ್ಷಗಳ ಹಿಂದೆ ಪಾರ್ಶ್ವವಾಯು ಆಗಿತ್ತು ಆದ್ದರಿಂದ ನನ್ನ ಹೆಸರಿಗೆ ನಿಪಿ.1 ನ್ನು ಬರೆದುಕೊಟ್ಟಿದ್ದರು. ನಯಾಜ್ ಪಾಷ ರವರಿಂದ 2024 ರಲ್ಲಿ ಎನ್.ಒ.ಸಿ ತೆಗೆದುಕೊಂಡಿದ್ದೆ. ನಿಪಿ.1 ನ್ನು ಯಾವ ದಿನಾಂಕದಂದು ಬರೆಸಿದ್ದು ಎಂದು ನೆನಪಿಲ್ಲ. ನಿಪಿ.1 ಕ್ಕೆ ನಾನು, ನನ್ನ ಹೆಂಡತಿ ಸಹಿ ಮಾಡಿದ್ದೇವೆ. ನಮ್ಮ ಸಹಿಗಳನ್ನು ಸಂದೀಪ್ ವಕೀಲರು ಗುರುತಿಸಿದ್ದರು. ನಮ್ಮನ್ನು ಬಿಟ್ಟು ಬೇರೆ ಯಾರು ಸಹಿ ಮಾಡಿದ್ದರು ಎಂದು ಗೊತ್ತಿಲ್ಲ. ನಿಪಿ.1 ರಲ್ಲಿರುವ ಅಂಶಗಳನ್ನು ನಾನು ಪೂರ್ಣ ಪ್ರಮಾಣವಾಗಿ ಓದಿದ್ದೇನೆ. ಸಾಕ್ಷಿ ನಿಪಿ.1 ರಲ್ಲಿರುವ ತನ್ನ ಮತ್ತು ತನ್ನ ಹೆಂಡತಿಯ ಸಹಿಗಳನ್ನು ಗುರುತಿಸಿದ್ದು, ಇನ್ನಿತರೇ ಸಹಿಗಳನ್ನು ಯಾರು ಮಾಡಿದ್ದು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದಿಂದ ನನ್ನ ತಂದೆ ಎಷ್ಟು ಜಮೀನುಗಳನ್ನು ಬರೆಸಿಕೊಂಡಿದ್ದಾರೆಂದು ಗೊತ್ತಿಲ್ಲ. ಆದರೆ ದಾವಾಸ್ವತ್ತಿನ ಬಗ್ಗೆ ಗೊತ್ತು. ದಾವಾಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ಸ್ವಾಮಿ ಉರುಫ್ ಕೆಂಪಯ್ಯ ರವರ ಜಮೀನು, ಉತ್ತರಕ್ಕೆ ಪುಟ್ಟರಾಜು ರವರ ಜಮೀನು, ದಕ್ಷಿಣಕ್ಕೆ ಎಜಾಜ್ ಷರೀಪ್ ರವರ ಜಮೀನು. ಸ್ವಾಮಿಯವರ ಜಮೀನಿನ ಸರ್ವೆ ನಂಬರ್ ನಿರ್ಧಿಷ್ಟವಾಗಿ ಗೊತ್ತಿಲ್ಲ, ಆದರೆ 17 ಗುಂಟೆ ಇದೆ. 17 ಗುಂಟೆಯ ಚಕ್ಕುಬಂದಿ ಪೂರ್ವಕ್ಕೆ ನನ್ನ ಜಮೀನು, ಪಶ್ಚಿಮಕ್ಕೆ ಐಯಣ್ಣೇಗೌಡರ ಜಮೀನು, ಉತ್ತರಕ್ಕೆ ಹೊಸಕೋಟೆ ರಾಮಣ್ಣನವರ ಮನೆ, ದಕ್ಷಿಣಕ್ಕೆ ಕಾಳೇಗೌಡರ ಜಮೀನು. ನನ್ನ ಜಮೀನಿನ ಉತ್ತರಕ್ಕಿರುವ ಪುಟ್ಟರಾಜುರವರ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ಅದು 10–12 ಗುಂಟೆ ಇರಬಹುದು. ಚಕ್ಕುಬಂದಿ ದಕ್ಷಿಣಕ್ಕೆ ನನ್ನ ಜಮೀನು, ಉತ್ತರಕ್ಕೆ ದೊರೆಕೆರೆ ರಸ್ತೆ, ಪೂರ್ವಕ್ಕೆ ಪಿರಿಯಾಪಟ್ಟಣ–ರಾವಂದೂರು ಮುಖ್ಯ ರಸ್ತೆ, ಪಶ್ಚಿಮಕ್ಕೆ ಜನತಾ ಮನೆಗಳು. ನನ್ನ ಜಮೀನಿನ ದಕ್ಷಿಣಕ್ಕೆ ಎಜಾಜ್ ಷರೀಪ್ ರವರ ಜಮೀನಿನ ಸರ್ವೆ ನಂ.5/14. ಅದು 5 ಗುಂಟೆ ಜಮೀನು ಇದೆ. ಎಜಾಜ್ ಷರೀಪ್ ರವರಿಗಿಂತ ಮೊದಲು ಬಸಪ್ಪಚಾರಿ ಎಂಬುವವರ ಹೆಸರಿನಲ್ಲಿದ್ದು,

ಅವರು ಮನೆಯನ್ನು ಕಟ್ಟಿಕೊಂಡಿದ್ದರು. ನಂತರ ಎಜಾಜ್ ಷರೀಫ್ ರವರಿಗೆ ಮಾರಾಟ ಮಾಡಿದ್ದಾರೆ. ಎಜಾಜ್ ಷರೀಫ್ ರವರ 5 ಗುಂಟೆ ಜಮೀನಿನ ಪೂರ್ವಕ್ಕೆ ರಸ್ತೆ ಇದೆ, ಪಶ್ಚಿಮಕ್ಕೆ ಸ್ವಾಮಿ ಉರುಫ್ ಕೆಂಪಯ್ಯ ರವರ ಜಮೀನು, ಉತ್ತರಕ್ಕೆ ನಮ್ಮ ಜಮೀನು, ದಕ್ಷಿಣಕ್ಕೆ ಪ್ರಸಾದ್ ರವರ ಮನೆ.

5. 4 ನೇ ಪ್ರತಿವಾದಿ ಸಲ್ಲಿಸಿರುವ ತಕರಾರನ್ನು ನಾನು ತಿಳಿದುಕೊಂಡಿಲ್ಲ. ದಾವಾ ಜಮೀನು ಮೂಲತಃ ನನ್ನ ತಂದೆ ಖರೀದಿಸಿದ್ದು. ಯಾವ ತಾರೀಖು, ತಿಂಗಳು ಖರೀದಿಸಿದ್ದು ಎಂದು ಗೊತ್ತಿಲ್ಲ. ಆದರೆ 1992 ರಲ್ಲಿ ಖರೀದಿಸಿದ್ದು. ನನ್ನ ತಂದೆಯ ಹೆಸರಿನಲ್ಲಿರುವ ಕ್ರಯಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ. ಕ್ರಯಪತ್ರದ ಚಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಐಯಣ್ಣೇಗೌಡ ಮತ್ತು ಶಿವಣ್ಣನವರ ಜಮೀನು, ಉತ್ತರಕ್ಕೆ ಬಸವೇಶ್ವರ ಸಮಿತಿಯ ಜಾಗ, ದಕ್ಷಿಣಕ್ಕೆ ದೊಡ್ಡಲಿಂಗಮ್ಮನವರ ಉಳಿಕೆ ಜಮೀನು. ನಿಪಿ.10 ಕ್ರಯಪತ್ರದಲ್ಲಿ ಪಶ್ಚಿಮಕ್ಕೆ ಬಸವೇಶ್ವರ ದೇವಸ್ಥಾನದ ಜಮೀನು ಎಂದು ಬರೆದು ಹೊಡೆದು ಹಾಕಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದಿಕ್ಕು ತಪ್ಪಾಗಿದ್ದರಿಂದ ಅದನ್ನು ಹೊಡೆದು ಬರೆದಿದ್ದಾರೆಂದು ನುಡಿಯುತ್ತಾರೆ. ಹೊಡೆದು ಹಾಕಿರುವ ಜಾಗದಲ್ಲಿ ನನ್ನ ತಂದೆಯಾಗಲೀ, ಮಾರಾಟಗಾರರಾಗಲೀ ಅಥವಾ ಪತ್ರ ಬರಹಗಾರರಾಗಲೀ ಸಹಿ ಮಾಡಿಲ್ಲ ಎಂದರೆ ಸರಿ. ನಿಪಿ.10 ನ್ನು ಯಾರು ಬರೆದಿದ್ದು ಮತ್ತು ಯಾರು ಸಹಿ ಮಾಡಿದ್ದಾರೆಂದು ಗೊತ್ತಿಲ್ಲ. ಸಾಕ್ಷಿ ಪುನಃ ಚೇರ್ಮ್ಯಾನ್ ತಮ್ಮಣ್ಣ ಮತ್ತು ದಾಸೇಗೌಡರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆಂದು ನುಡಿಯುತ್ತಾರೆ. ಚೇರ್ಮ್ಯಾನ್ ತಮ್ಮಣ್ಣ ಸಹಿ ಮಾಡಿಲ್ಲ ಎಂದರೆ ಸರಿ.

6. ದಾವಾಸ್ವತ್ತು ಈಗ ನನ್ನ ಹೆಂಡತಿಯ ಹೆಸರಿನಲ್ಲಿದೆ. ನನ್ನ ಹೆಂಡತಿಗೆ ನಾನೇ ವ್ಯವಸ್ಥಾ ಪತ್ರ ಮಾಡಿಕೊಟ್ಟಿದ್ದೆ. ವ್ಯವಸ್ಥಾ ಪತ್ರವನ್ನು 2016 ರಲ್ಲಿ ಮಾಡಿಕೊಟ್ಟಿದ್ದೆ. ತಾರೀಖು, ತಿಂಗಳು ಗೊತ್ತಿಲ್ಲ. ಅದಕ್ಕೆ ರಫೀಕ್ ಪಾಷ ಸಹಿ ಮಾಡಿದ್ದಾರೆ. ನನ್ನ ತಂದೆಯಿಂದ ನನ್ನ ಹೆಸರಿಗೆ ಪಂಚಾಯತಿ ಪಾಲು ಪಾರೀಕತ್ ಮುಖಾಂತರ ದಾಖಲೆಗಳು ಬಂದಿರುತ್ತವೆ. ಪಂಚಾಯತಿ ಪಾಲು ಪಾರೀಕತ್ ನ್ನು ಹಾಜರುಪಡಿಸಿರುತ್ತೇನೆ. ಅದು ನೊಂದಣಿಯಾಗಿಲ್ಲ.

ನನ್ನ ತಂದೆ ತೀರಿಕೊಂಡ ನಂತರ ಪಂಚಾಯತಿ ಪಾಲು ಪಾರೀಕತ್ ಮಾಡಿಕೊಂಡೆ. 2004 ರಲ್ಲಿ ಪಾಲು ಪಾರೀಕತ್ ಆಯಿತು. ಆದರೆ ತಾರೀಖು, ತಿಂಗಳು ನೆನಪಿಲ್ಲ. 2003 ರಲ್ಲಿ ನನ್ನ ತಂದೆ ತೀರಿಕೊಂಡರು. ಅದಕ್ಕೆ ಸಂಬಂಧಿಸಿದಂತೆ ಮರಣ ಪ್ರಮಾಣ ಪತ್ರವನ್ನು ಪಡೆದಿದ್ದೇನೆ. ಹಾಜರುಪಡಿಸಲು ತೊಂದರೆ ಇಲ್ಲ.

(ಮುಂದುವರೆದ ಪಾಟೀಸವಾಲನ್ನು ಪ್ರತಿವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹಿ.ಸಿ.ನ್ಯಾ. ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**